ಆ) ನಿವೃತ್ತಿಯಿಂದ ಖಾಲಿಯಾಗಿರುವ ಹುದ್ದೆಗಳನ್ನು ಭರ್ತಿಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಸ್. ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :

ಅ) ಮಂಡಳಿಯಲ್ಲಿ ಮಂಜೂರು ಆಗಿರುವ ಒಟ್ಟು ಹುದ್ದೆಗಳ ಸಂಖ್ಯೆ 578. ಜಿಲ್ಲಾವಾರು ವೃಂದ ಬಲವನ್ನು ನಿಗದಿಪಡಿಸಿರುವುದಿಲ್ಲ. ಕೆಲಸ ಕಾರ್ಯದ ಪ್ರಮಾಣವನ್ನು ಅನುಸರಿಸಿ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಆ) ದಿನಾಂಕ 31-01-01ಕ್ಕೆ ಇದ್ದಂತೆ 294 ಹುದ್ದೆಗಳು, ಖಾಲಿಯಿರುತ್ತದೆ. ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ನಿರ್ಬಂದನೆ ಜಾರಿಯಲ್ಲಿದ್ದು, ನಿರ್ಬಂದನೆ ತೆರವಾದ ನಂತರ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಇ) ನೇರ ನೇಮಕಾತಿ ಹುದ್ದೆಗಳ ಬಗ್ಗೆ ಸರ್ಕಾರವು ದಿನಾಂಕ 17-4-2000ರ ಆದೇಶದಂತೆ ನಿರ್ಬಂದವನ್ನು ವಿಧಿಸಿದ್ದು, ನಿರ್ಬಂದವನ್ನು ತೆರವುಗೊಳಿಸಿದ ನಂತರ ನಿವೃತ್ತಿಯಿಂದ ಖಾಲಿಯಾಗಿರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ದೊಡ್ಡಬಳ್ಳಾಪುರ ನಗರಸಭೆಯ ಮತದಾರರ ಪಟ್ಟಿಯ ಪರಷ್ಕರಣೆ

276 (548) ಶ್ರೀ ವಿ. ಕೃಷ್ಣಪ್ಪ ದೊಡ್ಡಬಳ್ಳಾಪುರ :- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ದೊಡ್ಡಬಳ್ಳಾಪುರ ನಗರ ಸಭೆಗೆ ಸಂಬಂಧಪಟ್ಟಂತೆ ವಾರ್ಡುಗಳಲ್ಲಿ ಮತದಾರರ ವಿಂಗಡಣೆಯಲ್ಲಿ ಭಾರೀ ಅಸಮತೋಲನ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ವಾರ್ಡುಗಳ ಗಡಿಯನ್ನು ಸಮನಾಗಿ ಗುರುತಿಸಿ, ಪ್ರತಿ ವಾರ್ಡುಗಳಿಗೂ ಮತದಾರರನ್ನು, ಪ್ರತಿ ವಾರ್ಡುಗಳಿಗೂ ಮತದಾರರನ್ನು ಸಿ-ಸಮಾನಗಿ ನಗದಿಪಡಿಸಲು ತೆಗೆದುಕೊಂಡ ಕ್ರಮಗಳೇನು? ನಿಮಾವಳಿಗಳ ವಿವರ ನೀಡುವುದು?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :

ಅ) ಇಲ್ಲ.

ಆ) ವಾರ್ಡುಗಳ ಗಡಿಗಳ ವಿಂಗಡಣೆಯನ್ನು ಕರ್ನಾಟಕ ಪುರಸಭೆಗಳ ಅಧಿನಿಯಮ 1964ರ ಪರಚ್ಛೇದ 13ರಲ್ಲಿನಂತೆ ಮಾಡಲಾಗಿದೆ. ಪ್ರಸ್ತುತ 1991ರ ಜನಗಣತಿಯನ್ನು ಆಧಾರವಾಗಿಟ್ಟುಕೊಂಡು ವಾರ್ಡುಗಳ ಗಡಿ ವಿಂಗಡಣೆ ಮಾಡಲಾಗಿರುತ್ತದೆ.

ರಾಜ್ಯದ ನಗರಸಭೆಗಳಲ್ಲಿರುವ ಓವರ್ ಹೆಡ್ ಟ್ಯಾಂಕ್‌ಗಳ ಬಗ್ಗೆ

277(550) ಶ್ರೀ ವಿ. ಕೃಷ್ಣಪ್ಪ (ದೊಡ್ಡಬಳ್ಳಾಪುರ):- ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?